## ಶ್ರೀನಂದನನಾಮ ಸಂವತ್ಸರ ವರ್ಷಫಲ ಸಂಗ್ರಹ

ಈ ನಂದನನಾಮ ಸಂವತ್ಸರದಲ್ಲಿ ಸರ್ವರೂ ಸೋಮರಸ ಪ್ರಿಯರಾಗುವರು. ಅಲ್ಲದೇ ಕಳ್ಳಕಾಕರುಗಳಿಂದ ಪೀಡಿತರಾಗುವರು. ಇದರಿಂದ ದೇಶಭಂಗವಾಗುವುದು. ಚಂದ್ರನು-ರಾಜ ಗುರುವು-ಮಂತ್ರಿ ಆಗಿರುವುದರಿಂದ ಸಕಾಲಕ್ಕೆ ಮಳೆಯಾಗಿ, ಕ್ಷೀರವೃದ್ಧಿಯಾಗಿ, ಧಾನ್ಯಗಳು ಬೆಳೆದು ಪ್ರಜೆಗಳು ಸುಭಿಕ್ಷೆಯಿಂದ ಬಾಳುವರಾದರೂ ಬುಧನು ಸೇನಾಧಿಪತಿ ಕುಜನು ರಸಾಧಿಪತಿಯಾದ್ದರಿಂದ ಅಲ್ಪವೃಷ್ಟಿಗೂ ಕಾರಣವಾಗಿ ಕೆಲವು ಕಡೆಗಳಲ್ಲಿ ಕಷ್ಟಕ್ಕೊಳಗಾಗುವರು. ರವಿಯು ಸಸ್ಯಾಧಿಪತಿಯಾಗಿರುವುದರಿಂದ ಕೆಲವು ಧಾನ್ಯಗಳು ಬೆಳೆಯುವುವು, ಕೆಲವು ಕಡೆ ಯುದ್ಧಭಯ, ಕಲಹಗಳು ಹೆಚ್ಚಾಗುವ ಸಂಭವವಿದೆ. ರವಿಯು ಆರ್ದ್ರಾನಕ್ಷತ್ರವನ್ನು ಹಗಲಿನಲ್ಲಿ ಪ್ರವೇಶಿಸುವುದರಿಂದ ಅಲ್ಪವೃಷ್ಟಿ ಬೆಲೆಗಳು ಹೆಚ್ಚಾಗಿ ಅನೇಕ ಕಷ್ಟಗಳುಂಟಾಗುವುದು.

ಶುಭಂಭೂಯಾತ್

## ಶ್ರೀ ನಂದನ ಸಂವತ್ಸರದ ಕರ್ಕಸಂಕ್ರಮಣ ಫಲ ವಿಚಾರ

ಶ್ರೀ ನಂದನನಾಮ ಸಂವತ್ಸರ ಆಷಾಡಮಾಸ ಕೃಷ್ಣಪಕ್ಷ ತ್ರಯೋದಶಿ ಸೋಮವಾರ ತಾ|| 16-07-2012ರಾತ್ರಿ 37 ಘಟಿ 12 ಪಳ (ರಾತ್ರಿ20 ಗಂ 45ನಿಕ್ಕೆ) ಸೂರ್ಯನು ಮೃಗಶಿರಾ ನಕ್ಷತ್ರದಲ್ಲಿ ಕರ್ಕರಾಶಿಯನ್ನು ಪ್ರವೇಶ ಮಾಡುತ್ತಾನೆ.

ವಿಂಶತಿ (ತ್ರಿಂಶತಿ ವಾ) ಕರ್ಕಟಗೇ ಪೂರ್ವೇ... ಎನ್ನುವ ಪ್ರಮಾಣದಂತೆ ಕರ್ಕ ಸಂಕ್ರಮಣದಲ್ಲಿ ಸಂಕ್ರಮಣಕ್ಕಿಂತ ಪೂರ್ವದಲ್ಲಿ 30 ಘಳಿಗೆಯಿಂದ ಸಂಕ್ರಮಣ ಪುಣ್ಯಕಾಲ ಎಂದಿರುವುದು. ಆದ್ದರಿಂದ ಈ ದಿನ ಪ್ರಾತಃ 8-45 ರಿಂದ ಸೂರ್ಯಾಸ್ತದವರೆಗೆ ಕರ್ಕ ಸಂಕ್ರಮಣ ಆದ್ದರಿಂದ ದಕ್ಷಿಣಾಯನ ಪರ್ವಪುಣ್ಯಕಾಲ ಪ್ರಯುಕ್ತ ಸ್ನಾನ, ತರ್ಪಣ, ದಾನಾದಿಗಳನ್ನು 8-45 ರ ನಂತರವೇ ಪರ್ವಕಾಲವಿಧಿಗಳನ್ನು ಆಚರಿಸತಕ್ಕದ್ದು.

ಶ್ರೀ ಶಕೆ 1934 ನಂದನ ಸಂವತ್ಸರ ಆಷಾಢ ಕೃಷ್ಣ ತ್ರಯೋದಶಿ ದಿ :16.07.2012 ರಂದು ಸೋಮವಾರ ಘ 37-12 ಘಳಿಕ್ಕೆ ಅಂದರೆ ರಾತ್ರಿ 8.45 ನಿಮಿಷಕ್ಕೆ ಸೂರ್ಯದೇವನು ಮಿಥುನರಾಶಿ ಬಿಟ್ಟು ಕರ್ಕರಾಶಿಗೆ ಪ್ರವೇಶ ಮಾಡುವನು, ಆದ್ದರಿಂದ ಅಸ್ತಾತ್ ಪೂರ್ವ 30-00 ಘ ವರೆಗೆ ಪರ್ವಪುಣ್ಯಕಾಲವಿರುತ್ತದೆ. ಅಸ್ತಾತ್ ಪೂರ್ವ ಘ 15-00 ಘ ವರೆಗೆ ಪುಣ್ಯತರ ಕಾಲ, ಅಸ್ತಾತ್ ಪೂರ್ವ ಘ 5-00 ವರೆಗೆ ಪರ್ವಪುಣ್ಯತಮ ಕಾಲವಿರುತ್ತದೆ, ಇಲ್ಲಿಂದ ದಕ್ಷಿಣಾಯನ ಪ್ರಾರಂಭವಾಗುವದು.

## ಮಕರ ಸಂಕ್ರಮಣ ಫಲವಿಚಾರ

ಶ್ರೀನಂದನನಾಮ ಸಂವತ್ಸರ ಪುಷ್ಯ ಶುದ್ಧ ತೃತೀಯ ಸೋಮವಾರ ತಾ|| 14-01-13ರಂದು ಮಧ್ಯಾಹ್ನ 13 ಘಟಿ 09 ಘಳ (ಮಧ್ಯಾಹ್ನ 12 ಗಂ 05ನಿ)ಕ್ಕೆ ಧನಿಷ್ಠಾ ನಕ್ಷತ್ರದಲ್ಲಿ ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸುತ್ತಾನೆ. ಆದುದರಿಂದ ತಾ|| 13-1-2013 ಶನಿವಾರವೇ ಭೋಗಿಹಬ್ಬ.

**ಸಂಕ್ರಮಣ ಪುಣ್ಯ ಕಾಲ:-** ತಾ|| 14-1-2013 ಸೋಮವಾರದಂದು ಮಧ್ಯಾಹ್ನ 12-05ರಿಂದ ಸೂರ್ಯಾಸ್ತದವರೆಗೆ ಉತ್ತರಾಯಣ ಪರ್ವಪುಣ್ಯ ಕಾಲವಿರುವುದು. ಆದಕಾರಣ ಉತ್ತರಾಯಣ ಪರ್ವಕಾಲ ಪ್ರಯುಕ್ತ ಸ್ನಾನದಾನಾದಿ ಷಟ್‌ತಿಲ ಕರ್ಮಗಳನ್ನು ಆಚರಿಸಬೇಕು. ಷಟ್ತಿಲ ಕರ್ಮಗಳಾದ ತಿಲಸ್ನಾನ, ತಿಲ ದೀಪ ಹಚ್ಚುವುದು (ಉದ್ವರ್ತಿ ಎಂದರೆ ಆರತಿ ಬತ್ತಿ), ತಿಲಹೋಮ, ತಿಲ ತರ್ಪಣ, ತಿಲಭಕ್ಷಣ, ತಿಲ ದಾನಗಳನ್ನು ಮಾಡಬೇಕು.

## ಮಕರ ಸಂಕ್ರಮಣ ಸ್ವರೂಪ

ಸಂಜ್ಞಾ-ಧ್ವಾಂಕ್ಷ, ದಿಶಾಮುಖ-ಪಶ್ಚಿಮ, ದಿಶಾಗಮನ-ಉತ್ತರ, ದಿಶಾದೃಷ್ಟಿ-ಈಶಾನ್ಯ, ವಾಹನ-ಗಜ, ಉಪವಾಹನ-ಖರ( ಗಾರ್ದಭ), ತತ್ ಫಲ-ಲಕ್ಷ್ಮೀ, ವಸ್ತ್ರ-ರಕ್ತ, ಸ್ಥಿತಿ-ಆಸೀನ, ಭೂಷಣ-ಗೋಮೇಧಕ, ಆಯುಧ-ಧನುಸ್ಸು ಪಾತ್ರ-ಆಯಸ, ಭಕ್ಷಣ-ಕ್ಷೀರ, ಲೇಪನ-ಗೋರೋಚನ, ಜಾತಿ-ಪಶು, ಪುಷ್ಪ-ಬಿಲ್ವ ಫಲ-ಖರ್ಜೂರ, ಆಭರಣ-ಕಿರೀಟ, ಕಂಚುಕ-ಸಿತಾ, ಅವಸ್ಥೆ-ಪ್ರೌಢ), ಸ್ನಾನ-ಸ್ನಾನೋದಕ-ನಿರ್ಮಲ, ಛತ್ರ-ಹೇಮ.